ಕದಿಯುವ ದೃಶ್ಯವೂ ಹಣಿಗೆಯ ಪ್ರಾಮುಖ್ಯತೆ ತೋರಿಸುತ್ತದೆ.

ಹರೆಯದಲ್ಲಿ ಯುವತಿಯರಿಗೆ ಲೈನ್ ಹೊಡೆಯುವ ಮುನ್ನ ಚಿಗುರುಮೀಸೆಯ ತರುಣರು, ಜೇಬಿನಲ್ಲಿರುವ ಹಣಿಗೆಯನ್ನು ತೆಗೆದು ಸರಸರ ಕ್ರಾಪ್ ಬಾಚಿಕೊಂಡು, ಹಿಂಬಾಲಿಸುವ ದೃಶ್ಯ ಸಿನಿಮಾ ಅಥವಾ ನೈಜ ಜೀವನದಲ್ಲಿ ಈಗಲೂ ಕಾಣಬಹುದು. ಹಣಿಗೆ ಇಲ್ಲದಿದ್ದರೆ ಬೆರಳುಗಳನ್ನೇ ಕೂದಲಿನೊಳಗೆ ತೂರಿಸಿ ಹಣಿಗೆಯನ್ನಾಗಿಸುವುದೂ ಇದೆ.

ದಶಕಗಳ ಹಿಂದೆ, ಪ್ರತಿಮನೆಗಳಲ್ಲಿ ಇರುತ್ತಿದ್ದ ಬಾಚಣಿಗೆಗಳು ಎಂದರೆ, ಒಂದು ಸಣ್ಣ ಹಲ್ಲಿನದು, ಒಂದು ದೊಡ್ಡ ಹಾಗೂ ಸಣ್ಣಹಲ್ಲು ಕೂಡಿರುವುದು, ಒಂದು ಹೇನುಗಳನ್ನು ಎಳೆಯಲು ಅನುಕೂಲವಾಗುವಂತೆ ಅಗಲ ಹಿಡಿಕೆ ಹಾಗೂ ಎರಡೂ ಬದಿಗಳಲ್ಲಿ, ಒತ್ತುಕಟ್ಟಾಗಿ ಅತಿ ಸಣ್ಣ ಹಲ್ಲುಗಳನ್ನು ಹೊಂದಿರುವುದು, ಇಲಿಗಿಂತ ಬಾಲವೇ ಉದ್ದ ಎನ್ನುವಂತೆ, ಹಿಡಿಕೆಗಿಂತ ಹತ್ತುಪಟ್ಟು ಉದ್ದನೆಯ ಹಲ್ಲುಗಳನ್ನು ಹೊಂದಿದ್ದ, ಸೀರುಗಳನ್ನು ಬುಡಸಮೇತ ಎಳೆದು ನೋಣೆಯುವ ಸೀರಣಿಗೆ, ಇವಿಷ್ಟನ್ನು ಬಿಟ್ಟರೆ ಬೇರೆ ಬಾಚಣಿಗೆಗಳ ಬಗ್ಗೆ ಮಾಹಿತಿಯಿದ್ದದ್ದು ಕಡಿಮೆ. ನಂತರ ಕೂದಲಿನ ಸಿಕ್ಕು ಬಿಡಿಸಲು, ಎರಡು ರಿಂಗುಗಳಲ್ಲಿ ಬೆರಳು ತೂರಿಸಿ ಬಾಚಬಹುದಾದ ಅಗಲ ಹಲ್ಲಿನ, ದುಂಡನೆಯ ಪ್ಲಾಸ್ಟಿಕ್ ಬಾಚಣಿಗೆ ಕಾಲಿಟ್ಟಿತ್ತು.

ಇಡೀ ಮನೆಯ ಜನರೆಲ್ಲರ ಕೂದಲುಗಳನ್ನು ಬಾಚಿ ಬಾಚಿ ಬಾಚಣಿಗೆಯ ಹಲ್ಲುಗಳು, ಥೇಟ್ ಬಾಯಿಯಲ್ಲಿರುವ ದುರಂತ ದಂತಗಳ ಕತೆಗಳನ್ನು ನೆನಪಿಸುತ್ತಿದ್ದವು. ಕೆಲವು ಹಲ್ಲುಗಳು ಸಂದುಬಿಟ್ಟು ವಿರುದ್ಧ ದಿಕ್ಕಿಗೆ ಮುಖ ಮಾಡಿರುತ್ತಿದ್ದವು. ತಲೆಸ್ನಾನದಿಂದಲೂ ನಿರ್ಮೂಲನೆಯಾಗದ ಕಸ, ಕೊಳೆ, ದೂಳು ಎಲ್ಲವೂ ಹಲ್ಲಿನ ಸಂದಿಯಲ್ಲಿ ಶೇಖರಣೆಯಾಗುತ್ತಿತ್ತು. ಅದರ ಸ್ವಚ್ಛತೆಗೆ ಕಡ್ಡಿಪೊರಕೆಯ ಕಡ್ಡಿ, ಸೇಫ್ಟಿಪಿನ್ನು ಅಥವಾ ಹಳೆಯ ಟೂಥ್‌ಬ್ರಶ್ ಅನ್ನು ಸಲಿಕೆಯಂತೆ ಉಪಯೋಗಿಸಿ ಎಳೆದೆಳೆದು, ಜೊತೆಗೆ ನೆಲಕ್ಕೆ ರಪರಪನೆ ಬಡಿಯಬೇಕಾಗುತ್ತಿತ್ತು. ಟೂಥ್‌ಪಿಕ್ ಉಪಯೋಗಿಸಿ ಹಲ್ಲುಸಂದಿಗಳ ನಡುವೆ ತೂರಿಸಿ ಹೊರದಬ್ಬುವಂತೆ, ಹಲಸಿನ ಹಾಗೆ ಬಗೆದು, ಹಲ್ಲುಗಳ ನಡುಗೆ ಸಿಲುಕಿಕೊಂಡ ಹೇನುಗಳನ್ನು, ಉಗುರುಗಳನ್ನು ತೂರಿಸಿ ತೂರಿಸಿ ಹೊರನೂಕಿ, ಅದೇ ಬಾಚಣಿಗೆಯ ಮೇಲಿಟ್ಟು ಹೆಬ್ಬೆರಳಿನ ಉಗುರಿನಿಂದ 'ಛಟೀರ್' ಎಂದು ಕುಕ್ಕಿ ಪರಲೋಕ ಸೇರಿಸುವುದಿತ್ತು. ಎಷ್ಟೋ ಸಲ ನಾಲ್ಕಾರು ಹಲ್ಲುಗಳು ಮುರಿದುಹೋಗಿ, ತುದಿಗಳು ಸವೆದು ಮೊಂಡಾಗಿ, ಬುರುಡೆಗೆ ಹಣಿಗೆ ಒತ್ತುವ ಸೆನ್ಸ್ ಕೂಡ ಗೊತ್ತಾಗದಷ್ಟು ಸೆನ್ಸ್‌ಲೆಸ್ ಆಗಿ ಅಥವಾ ಬಾಚಣಿಗೆಯೇ ಮುರಿದುಹೋಗುವ ತನಕ ಅವುಗಳನ್ನು ಬದಲಾಯಿಸುವ ತಂಟೆಗೆ ಹೋಗುತ್ತಿರಲಿಲ್ಲ.

ಒಂದಕ್ಕೊಂದು ಫ್ರೀ ಆಫರ್‌ನಂತೆ, ಕೂದಲನ್ನು ಬಾಚುವುದರ ಜೊತೆಗೆ, ತಲೆಬುರುಡೆಯ ತುರಿಕೆ, ಕುತ್ತಿಗೆ ಹಾಗೂ ಬೆನ್ನಿನ ಕೆರೆತವನ್ನೂ ಮುಂದುವರೆಸಿ ತಾತ್ಕಾಲಿಕ ಉಪಶಮನ ಪಡೆಯುವುದು ಸಾಮಾನ್ಯ ಸಂಗತಿಯಾಗಿತ್ತು. ನೆಲದ ಮೇಲಿಟ್ಟ ಬಾಚಣಿಗೆಯ ಮೇಲೆ ಅಪ್ಪಿತಪ್ಪಿ ಕಾಲಿಟ್ಟರೆ ಸ್ಕೇಟಿಂಗ್‌ಗಿಂತ ವೇಗವಾಗಿ, ಸ್ಮೂತಾಗಿ ಜಾರುವ ಸಂಭವ ಹೆಚ್ಚಿರುವುದರಿಂದ, ಎಚ್ಚರ ವಹಿಸದವರನ್ನು 'ಜಾರಿ ಬಿದ್ದ ಜಾಣರ' ಗುಂಪಿಗೆ ಸೇರಬಹುದು.

ಐದಾರು ಸಾವಿರ ವರ್ಷಗಳ ಕೆಳಗೆ ಜನರಿಗೆ ಬಾಚಣಿಗೆಯ ಪರಿಕಲ್ಪನೆಯೂ ಇರಲಿಲ್ಲವಂತೆ. ಕೂದಲನ್ನು ತೊಳೆಯುವುದು, ಬಾಚುವುದನ್ನೂ ಮಾಡುತ್ತಿರಲಿಲ್ಲವಂತೆ. ಈಗಿನವರು ಒಂದೊತ್ತು ತಲೆ ಬಾಚಿಕೊಳ್ಳದಿದ್ದರೆ ಟಗರಿನ ತಲೆಯಂತಾಗಿರುತ್ತದೆ, ನಾಲ್ಕು ದಿನ ತಲೆಸ್ನಾನ ಮಾಡದಿದ್ದರೆ, ತಲೆಕಾಡಿನಲ್ಲಿ ಸದಾ ಕೈಬೆರಳುಗಳನ್ನು ತೂರಿಸಿ, ಕರಡಿಯಂತೆ ಎರಡೂ ಕೈಗಳಿಂದ ತುರಿಸಿಕೊಳ್ಳುತ್ತಾ ಓಡಾಡಬೇಕಾದ ಪರಿಸ್ಥಿತಿ. ಆಗೆಲ್ಲ ಹೆಣ್ಣುಮಕ್ಕಳು ಮತ್ತು ಗಂಡುಮಕ್ಕಳು ಇಬ್ಬರ ಕೂದಲುಗಳೂ ಉದ್ದವಿರುತ್ತಿದ್ದುದರಿಂದ ಜಾನುವಾರುಗಳ



ಮಲ, ಅದರಲ್ಲೂ ಹೆಚ್ಚಾಗಿ ಕುದುರೆಯದು ತೆಗೆದುಕೊಂಡು ಗೋಂದಿನಂತೆ ಬಳಸಿ, ಈಗಿನವರ ಡ್ರೆಡ್–ಲಾಕ್ ಶೈಲಿಯಂತೆ ಹುರಿಗಟ್ಟುತ್ತಿದ್ದರಂತೆ. ತಲೆತುಂಬ ಲದ್ದಿಯೇ ತುಂಬಿದ ಮೇಲೆ ತಲೆಹೊಟ್ಟು ಉಂಟಾಗುವ ಸಂಭವವಾದರೂ ಎಲ್ಲಿತ್ತು? ಹೇನುಗಳು ಅಕಸ್ಮಾತ್ ಸೇರಿಕೊಂಡರೂ, ಗಂಟಾದ ಅಂಟು ಕೂದಲುಗಳ ಜೊತೆಗೆ ನಂಟು ಬೆಳೆಸಲಾಗದೆ ಗಂಟುಮೂಟೆ ಕಟ್ಟಿ ಹೊರಡಬೇಕಾಗುತ್ತಿತ್ತು. ಹಾಗಾಗಿ ಆ ಜನಾಂಗವನ್ನು ಬಾಚಣಿಗೆಯ ಹಂಗಿಲ್ಲದ ಭಾಗ್ಯವಂತರು ಎನ್ನಬಹುದು.

ಹೇಗೆಲ್ಲ ಉರುಳಾಡಿದರೂ ಕೂದಲು ಹರಡುವ ಗೊಡವೆಯಿರಲಿಲ್ಲ. ಹೇಗೆ ವಿನ್ಯಾಸ ಮಾಡಿದರೂ, ಮತ್ತೊಮ್ಮೆ ಅದರ ತಂಟೆಗೆ ಹೋಗುವವರೆಗೆ ಶಾಶ್ವತವಾಗಿ ಅದೇ ಶೈಲಿಯಲ್ಲಿ ಉಳಿಯುವುದಿತ್ತು. ಬಹುಶಃ ನಮ್ಮ ಋಷಿಮುನಿಗಳ ಜಟೆ, ನಾರುಮುಡಿ, ಅಘೋರಿ ಬಾಬಾಗಳು, ನಾಗಾಸಾಧುಗಳು ಕೂದಲನ್ನು ಕಟ್ಟಿಕೊಳ್ಳುವ ರಹಸ್ಯ ಇದೇ ಇರಬಹುದು.

ಈ ಬಾಚಣಿಗೆಗೂ ಒಂದು ಪುರಾಣ ಇದೆ ಎಂದರೆ ನಂಬಲೇಬೇಕು. ರಾಜಕುಮಾರಿಯೊಬ್ಬಳು ತನ್ನ ಪ್ರೀತಿಯ ಕುದುರೆಯ ಬಾಲ ಸಿಕ್ಕುಗಟ್ಟಿದ್ದು ಮತ್ತು ಅದರ ಕುತ್ತಿಗೆಯ ನೀಳ ಕೂದಲನ್ನು, ಮೀನಿನ ಎಲುಬು ಬಳಸಿ ಬಾಚಿದಾಗ ಜೂಲು ನೇರವಾಗಿ ನಿಂತಿತಂತೆ. ಆಗ ಇದನ್ನು ತನ್ನ ಕೂದಲಿಗೂ ಮಾಡಿದರೆ ಹೇಗೆ ಎನ್ನುವ ಆಲೋಚನೆಯೇ ಹಣಿಗೆಯ ಆವಿಷ್ಕಾರಕ್ಕೆ ಕಾರಣವಾಯಿತು ಎಂದು ಪರ್ಷಿಯಾ ಪುರಾಣದಲ್ಲಿದೆಯಂತೆ. ತಿನ್ನುವಾಗ ಗಂಟಲಿಗೆ ಅಡ್ಡಬರದಂತೆ, ಮೀನಿನ ಎಲುಬನ್ನು ಮೀನಾಮೇಷ ಎಣಿಸದೆ ತೆಗೆದು ಎಸೆಯುವುದರ ಬಗ್ಗೆಯೇ ಗಮನವಿರುವವರ ನಡುವೆ, ಅದನ್ನು ಕಸದಿಂದ ರಸ ತೆಗೆಯುವಂತೆ ರಿಸೈಕಲ್ ಮಾಡುವ ಬಗ್ಗೆ ಯೋಚಿಸಿದ ರಾಣಿಯ ಜಾಣತನವನ್ನು ಮೆಚ್ಚಲೇಬೇಕು. ಬಹುಶಃ ಅದರ ಬಾಲದ ನೇರ ಕೂದಲುಗಳನ್ನು ನೋಡಿಯೇ ಪೋನಿಟೈಲ್ ಎನ್ನುವ ಕೇಶವಿನ್ಯಾಸಕ್ಕೆ ಆ ರಾಣಿ ಮೊದಲ ಮುನ್ನುಡಿ ಬರೆದಿದ್ದಳೋ ಏನೋ!

ಬೆರಳು ತೋರಿಸಿದರೆ ಹಸ್ತವನ್ನೇ ನುಂಗುವಂತೆ, ನಂತರ ಮನುಷ್ಯ ಸಿಕ್ಕ ಸಿಕ್ಕ ಪ್ರಾಣಿಗಳ ಎಲುಬು, ಕೊಂಬು, ಚಿಪ್ಪು, ಆನೆದಂತ, ಮರ, ಬೆಳ್ಳಿ, ತಾಮ್ರ, ತವರ, ಕಬ್ಬಿಣ, ಪಕ್ಷಿಗಳ ಗರಿಗಳು, ಹೀಗೆ ವಿವಿಧ ವಸ್ತುಗಳನ್ನು ಉಪಯೋಗಿಸಿ ಹಣಿಗೆ ತಯಾರಿಸತೊಡಗಿದನಂತೆ. ಹತ್ತಿಯಿಂದ ಬೀಜವನ್ನು ಬೇರ್ಪಡಿಸಲೂ ಹತ್ತಿ ಉದ್ಯಮದಲ್ಲಿ ವಿಶೇಷವಾದ ಹಣಿಗೆ ಬಳಸುತ್ತಿದ್ದರಂತೆ. ಪೊಲೀಸರು ಅಪರಾಧ ತನಿಖೆಯಲ್ಲಿ ಮೊದಲು ಸಾಕ್ಷ್ಯಕ್ಕೆ ಪಡೆಯುವುದೇ ಬಾಚಣಿಗೆಯಂತೆ.

ಬ್ಯೂಟಿಪಾರ್ಲರ್, ಕಟಿಂಗ್ ಶಾಪ್‌ಗಳಲ್ಲಿ ಹಣಿಗೆಗಳದೇ ರಾಜ್ಯಭಾರ ಹೆಚ್ಚು. ಬಚ್ಚಲು ತಿಕ್ಕುವ ಬ್ರಶ್‌ಗಿಂತ ದೊಡ್ಡ ಅಳತೆಯಲ್ಲಿ, ನಾನಾ ವಿನ್ಯಾಸಗಳಿರುವ ಹೇರ್‌ಬ್ರಶ್ ಹೆಸರಿನ ಬಾಚಣಿಗೆಗಳ ಸದ್ದು ಇತ್ತೀಚಿನ ದಶಕಗಳಲ್ಲಿ ಜೋರಾಗಿದೆ. ಗಡ್ಡ, ಮೀಸೆ, ಹುಬ್ಬು ಎಲ್ಲವನ್ನೂ ಬಾಚುವುದರ ಜೊತೆಗೆ, ತಲೆಗೆ ಮಸಾಜ್ ಮಾಡಲು, ಬಣ್ಣ ಹಚ್ಚಲು, ಒಣಗಿಸಲು, ಎಣ್ಣೆ ಬಳಿಯಲೂ ಸಹ ವಿವಿಧ ವಿನ್ಯಾಸದ ಬಾಚಣಿಗೆಗಳು ಲಭ್ಯವಿವೆ.

ಸರ್ವಾಂಗಗಳಲ್ಲಿ ಶಿರಸ್ಸು, ಸರ್ವೇಂದ್ರಿಯಗಳಲ್ಲಿ ನಯನ ಪ್ರಧಾನವಿರುವಂತೆ, ಸರ್ವಶೃಂಗಾರ ಪ್ರಸಾಧನಗಳಲ್ಲಿ ಹಣಿಗೆಗೇ ಅಗ್ರಸ್ಥಾನ ಎಂದರೂ ಉತ್ಪ್ರೇಕ್ಷೆಯಿಲ್ಲ. ಕುಲವನ್ನು ಕಾಪಾಡುವ ಕುಲದೈವದಂತೆ, ತಲತಲಾಂತರದಿಂದ ತಲೆಗೂದಲಿನ ತಲೆ ಕಾಯ್ದುಕೊಂಡು ಬರುತ್ತಿರುವ, ತಲೆದೈವ ಬಾಚಣಿಗೆಯನ್ನು ಕೇಶಶೃಂಗಾರದ 'ತಲೈವ' ಎನ್ನಬಹುದಲ್ಲವೇ?

ಪ್ರತಿಕ್ರಿಯಿಸಿ: **feedback@sudha.co.in**